# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಕೇರಳದಲ್ಲಿ ಎಲ್ಲೆ ಮೀರಿರುವ ಕಮ್ಯುನಿಸ್ಟ್ ಹಿಂಸಾಕೃತ್ಯವನ್ನು ಖಂಡಿಸಿ ಮಾರ್ಚ್ 1ರಂದು ದೇಶದಾದ್ಯಂತ ಪ್ರತಿಭಟನೆಗಳು ನಡೆಯಿತು.

ಸಂಪುಟ : 38 ಸಂಚಿಕೆ : 15 ದುರ್ಮುಖಿ–ಫಾಲ್ಗುಣ ಕಲಿಯುಗಾಬ್ದ 5118 15–3–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ವಿದ್ಯಾರ್ಥಿಗಳೇ, ದೇಶವಿರೋಧಿಗಳ ದಾಳವಾಗದಿರಿ

## ರಾಮ್ಜಸ್ ಕಾಲೇಜು ಪ್ರಕರಣ * ರಾಷ್ಟ್ರವಾದ V/S ಪ್ರತ್ಯೇಕತಾವಾದದ ಸಜೀವ ಚಿತ್ರಣ

ಕಳೆದ ತಿಂಗಳ (ಫೆಬ್ರುವರಿ) ಅಂತಿಮ ವಾರದಲ್ಲಿ ದೇಶದ ರಾಜಧಾನಿ ದೆಹಲಿಯಲ್ಲಿ ನಡೆದ ಘಟನಾವಳಿಗಳು ರಾಷ್ಟ್ರದ ವಿದ್ಯಾರ್ಥಿವೃಂದದಲ್ಲಿ ರಾಷ್ಟ್ರವಾದ ಮತ್ತು ಪ್ರತ್ಯೇಕತಾವಾದದ ಕುರಿತಾಗಿ ತಮ್ಮ ಧೋರಣೆಯನ್ನು ಪ್ರಶ್ನಿಸಿಕೊಳ್ಳುವ ಸಂದರ್ಭಕ್ಕೆ ಸಾಕ್ಷಿಯಾಯಿತು.

ಫೆಬ್ರುವರಿ 21 ರಂದು ದೆಹಲಿ ವಿಶ್ವವಿದ್ಯಾಲಯದ ವ್ಯಾಪ್ತಿಯ ರಾಮ್ಜಸ್ ಕಾಲೇಜಿನಲ್ಲಿ ಎಡಪಂಥೀಯ ವಿಚಾರಧಾರೆಯ ವಿದ್ಯಾರ್ಥಿ ಸಂಘಟನೆ AISA (All India Students Association) "ಪ್ರತಿಭಟನೆಯ ಸಂಸ್ಕೃತಿಗಳು" ಎಂಬ ವಿಚಾರಗೊಷ್ಠಿಯೊಂದನ್ನು ಆಯೋಜಿಸಿತ್ತು. ಆ ಕಾರ್ಯಕ್ರಮಕ್ಕೆ ಭಾಷಣಕಾರನಾಗಿ ಆಹ್ವಾನಿತನಾಗಿದ್ದು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ಉಮರ್ ಖಾಲಿದ್ ಮತ್ತು ಶೆಹ್ಲಾ ರಶೀದ್.

ದೇಶದ್ರೋಹದ ಆರೋಪ ಹೊತ್ತಿರುವ ಉಮರ್ ಖಾಲಿದ್ ಮತ್ತು ಆತನ ಸಹಚರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನೆಪದಲ್ಲಿ ಕಾಲೇಜು ವಾತಾವರಣಕ್ಕೆ ಧಕ್ಕೆತರುವುದನ್ನು ದೇಶಭಕ್ತಿಯ ಸಹಜಭಾವದಿಂದ ಪ್ರೇರಿತ ಕಾಲೇಜಿನ ಕೆಲ ವಿದ್ಯಾರ್ಥಿಗಳು ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ತಡೆದರು. ಆದರೆ ತೀವ್ರಸ್ವರೂಪಕ್ಕೆ ತಿರುಗಿದ ಮುಂದಿನ ಘಟನಾವಳಿ ಕಳೆದ ಫೆಬ್ರುವರಿ 22ರಂದು ವಿದ್ಯಾರ್ಥಿ ಬಣಗಳೆರಡರ ಮಧ್ಯದ ಸಂಘರ್ಷದಲ್ಲಿ ಪರ್ಯವಸನವಾಯಿತು. ಈ ಘಟನೆಯಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡರು.

### ಯೋಜನೆಯ ರೂಪಾಂತರ ಮತ್ತು ಅದರ ಕಾರ್ಯಾನ್ವಯ

ತಮ್ಮ ಯೋಜನೆಯಂತೆ ಕಾರ್ಯಕ್ರಮ ನಡೆಯದೇ ಹೋಗಿದ್ದಕ್ಕೆ ಪ್ರತೀಕಾರವಾಗಿ AISA ಮತ್ತು SFI (ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ)ದ ಕಾರ್ಯಕರ್ತರು ವಿದ್ಯಾರ್ಥಿ ಪರಿಷತ್ತಿನ ತೇಜೋವಧೆಗೆ, ಪ್ರತಿಭಟನಾ ಮೆರವಣಿಗೆಗಳನ್ನೂ, ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡರು. ಇದರ ಭಾಗವಾಗಿ ಉರುಳಿಸಿದ್ದ ದೆಹಲಿಯ ಲೇಡಿ ಶ್ರೀರಾಂ ಕಾಲೇಜಿನ ಗುರ್ಮೇಹರ್ ಕೌರ್ ಎಂಬ ವಿದ್ಯಾರ್ಥಿನಿಯ ದಾಳ. ಆಕೆಯ ತಂದೆ ಕಾಶ್ಮೀರದ ಗಡಿಯಲ್ಲಿ ದೇಶದ ರಕ್ಷಣೆಯಲ್ಲಿದ್ದಾಗ ಉಗ್ರರ ಗುಂಡಿಗೆ ಹುತಾತ್ಮರಾದ ವೀರಯೋಧ. ಇಂತಹ ಸೂಕ್ಷ್ಮ ಸಂವೇದನಾಶೀಲ ಹಿನ್ನೆಲೆಯುಳ್ಳ ವಿದ್ಯಾರ್ಥಿನಿಯೊರ್ವಳು "ನನ್ನ ತಂದೆಯ ಸಾವಿಗೆ ಯುದ್ಧ ಕಾರಣವೇ ಹೊರತು ಪಾಕಿಸ್ತಾನವಲ್ಲ", "ನಾನು ABVPಗೆ ಹೆದರೊಲ್ಲ" ಎಂಬಿತ್ಯಾದಿ ತಲೆಬುಡಗಳಿಲ್ಲದ ಪೋಸ್ಟುಗಳನ್ನು ಹರಿಯಬಿಟ್ಟರು. ಇಂತಹ




*ಹುತಾತ್ಮಯೋಧನ ಮಗಳಾದ ಗುರ್ಮೇಹರ್ ಕೌರ್ 'ಪಾಕಿಸ್ತಾನ ನನ್ನ ತಂದೆಯನ್ನು ಕೊಂದಿಲ್ಲ; ಯುದ್ಧ ಕೊಂದಿತು' ಎಂಬ ದೇಶವಿರೋಧಿ ಹೇಳಿಕೆಗೆ ಕ್ರಿಕೆಟಿಗ ಸೆಹ್ವಾಗ್ 'ಎರಡು ಬಾರಿ ತ್ರಿಶತಕ ಹೊಡೆದಿದ್ದು ನಾನಲ್ಲ; ನನ್ನ ಬಾಟ್' ಎಂದು ತೀಕ್ಷ್ಣವಾಗಿ ಖಂಡಿಸಿದರು.*

ತರ್ಕರಹಿತ ಪೋಸ್ಟುಗಳನ್ನೇ ರಾಷ್ಟ್ರೀಯ ಮಹತ್ವದ ಸುದ್ದಿಯಾಗಿಸಿದ ಸುದ್ದಿಮಾಧ್ಯಮಗಳ ಒಂದು ಬಣ ಯಥಾಪ್ರಕಾರ ಈ ಘಟನೆಗಳನ್ನು ವಿದ್ಯಾರ್ಥಿ ಪರಿಷತ್ತು, ರಾಷ್ಟ್ರೀಯ ಸ್ವಯಂಸೇವಕ ಸಂಘ, ಮತ್ತು ಭಾಜಪಗಳ ವಿರುದ್ಧದ ತಮ್ಮ ಹಗೆ ಸಾಧಿಸುವ ನಿರ್ಲಜ್ಜ ಅವಕಾಶವಾಗಿ ಬಳಸಿಕೊಂಡವು. ಎರಡೂ ಕಡೆಗಳ ವಿದ್ಯಾರ್ಥಿಗಳ ತಿಕ್ಕಾಟದಲ್ಲಿ ಪರಿಷತ್ತಿನ ವಿದ್ಯಾರ್ಥಿನಿಯೊರ್ವಳು ಗಂಭೀರವಾಗಿ ಗಾಯಗೊಂಡಿದ್ದರೂ, ಪರಿಷತ್ತಿನ ಇತರೆ ಅನೇಕ ವಿದ್ಯಾರ್ಥಿಗಳು ದೈಹಿಕವಾಗಿ ಹಲ್ಲೆಗೊಳಗಾದರೂ ಈ ಮಾಧ್ಯಮಗಳ ಕ್ಯಾಮೆರಾ ಕಣ್ಣಿಗೆ ಅಸಹಾಯಕರಾಗಿ, ಅಮಾಯಕರಾಗಿ ಕಂಡಿದ್ದು AISAನ ಕಾರ್ಯಕರ್ತರು ಮತ್ತು ಸಮರ್ಥಕರು ಮಾತ್ರ.

ಅಸಹಿಷ್ಣುತೆ, ವಾಕ್ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯದ ಹನನ ಎಂಬ ತಮ್ಮ ಸವಕಲು ನಾಣ್ಯವನ್ನೇ ಹೊಸಪಾಲೀಶಿನೊಂದಿಗೆ ಮೆರೆಯಿಸಲು ಸಮಾಜದಲ್ಲಿ ಅಹಿತಕರ ಘಟನೆಗಳು ನಡೆಯುವುದನ್ನೇ ಹೊಂಚುಹಾಕುವಂತೆ ತೋರುವ ತಥಾಕಥಿತ ಬುದ್ಧಿಜೀವಿಗಳ ಬಳಗವೇ ನಮ್ಮಲ್ಲೊಂದಿದೆ. ಅದರಂತೆಯೇ ವಿದ್ಯಾರ್ಥಿಗಳನ್ನು ಆಕರ್ಷಿಸಬಲ್ಲ ಸಿನೆಮಾ ತಾರೆಯರಂತಹ ಸಮಾಜದ ಪ್ರಭಾವಿಗಳ ವರ್ಗವೂ ಇದೆ. ರಾಮ್ಜಸ್ ಕಾಲೇಜಿನ ಘಟನೆಯು ಮತ್ತೊಮ್ಮೆ ಇವರೆಲ್ಲರಿಗೆ ರಾಷ್ಟ್ರೀಯ ಸುದ್ದಿವಾಹಿನಿಗಳ ಚರ್ಚೆಗಳಲ್ಲಿ ಪುಂಖಾನುಪುಂಖವಾಗಿ ತಮ್ಮ ರಾಗ ಆಲಾಪಿಸಲು, ವೃತ್ತಪತ್ರಿಕೆಗಳ ಅಂಕಣಗಳಲ್ಲಿ ತಮ್ಮ ಬೊಗಳೆ ಮಾನವ ಪ್ರೇಮದ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದಂತಾಯಿತು. ಇಂತಹ ಬುದ್ಧಿಜೀವಿ ಮತ್ತು ಪ್ರಭಾವಿಗಳು ತಮ್ಮ ಮಾತು–ಲೇಖನಗಳ ಮೂಲಕ, ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ದೇಶವಿರೋಧಿಗಳ ಭಾಷಣಗಳನ್ನು ವಿರೋಧಿಸಿದ್ದರಿಂದಲೇ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣದ ಸೃಷ್ಟಿಯಾಗಿದೆ ಎಂದು ಒಮ್ಮೆ ಜರಿದರೆ ಮತ್ತೊಮ್ಮೆ ಸಾಮಾಜಿಕ ಜಾಲತಾಣದಲ್ಲಿ ಗುರ್ಮೇಹರ್ ಕೌರಳ ಪೋಸ್ಟಿನ ಬಾಲಿಶತನವನ್ನು ಎತ್ತಿಹಿಡಿದು ಆಕೆಗೆ ತಾರ್ಕಿಕವಾಗಿ ಉತ್ತರಿಸಿದವರೆಲ್ಲ "ಅನಕ್ಷರಸ್ಥರು" ಎಂದು ವೈಯಕ್ತಿಕವಾಗಿ ಹೆಸರಿಡುವ ತಮ್ಮ ಚಾಳಿಯನ್ನು ವ್ಯವಸ್ಥಿತವಾಗಿ ಮುಂದುವರಿಸಿಕೊಂಡು ಬಂದರು. ಇವೆಲ್ಲದಕ್ಕೆ ಮೇಲಾಗಿ ಉರಿವ ಬೆಂಕಿಗೆ ತುಪ್ಪ ಸುರಿಯಲು ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ನೇತಾರರೂ ಸಹ ಗುರ್ಮೇಹರ್ ಕೌರ್ ಳಿಗೆ ಬೆಂಬಲವನ್ನು ಸೂಚಿಸಿ ರಾಜಕೀಯ ಮೇಲುಗೈ ಸಾಧಿಸುವ ಧಾವಂತದಲ್ಲಿ ಸಮಾಜಘಾತುಕ ತತ್ವಗಳೊಂದಿಗೆ, ಪ್ರತ್ಯೇಕತಾವಾದಿಗಳೊಂದಿಗೆ ತಮಗಿರುವ ಘನಿಷ್ಠತೆಯನ್ನು ಮುಚ್ಚುಮರೆಯಿಲ್ಲದೆ ತೋರಿಸಿದವು.

### ಅಂದು ಜೆಎನ್‌ಯುನಲ್ಲಿ...

2016ರ ಫೆಬ್ರುವರಿ 9ರಂದು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯ (JNU)ದಲ್ಲಿ ಡೆಮಾಕ್ರಟಿಕ್ ಸ್ಟೂಡೆಂಟ್ ಯೂನಿಯನ್ ಎಂಬ ವಿದ್ಯಾರ್ಥಿ ಸಂಘಟನೆಯು 'ಸಾಂಸ್ಕೃತಿಕ ಸಂಜೆ' ಎಂಬ ಹೆಸರಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಿತು. ಕಾರ್ಯಕ್ರಮದ ಆಯೋಜಕರು ಒಂದು ಕರಪತ್ರ ಹಂಚಿದರು. ಅದರಲ್ಲಿ "ಅಫ್ಜಲ್ ಗುರು ಮತ್ತು ಮಕ್ಬೂಲ್ ಬಟ್ ಅವರ ನ್ಯಾಯಾಂಗ ಹತ್ಯೆಯನ್ನು ಖಂಡಿಸಲು ಈ 'ಸಾಂಸ್ಕೃತಿಕ ಸಂಜೆ' ಕಾರ್ಯಕ್ರಮವನ್ನು ಸಂಘಟಿಸುತ್ತಿದ್ದೇವೆ" ಎನ್ನುವ ಒಂದು ಒಕ್ಕಣೆಯಿತ್ತು. ಉಗ್ರಗಾಮಿಗಳ ಪರವಾಗಿ ಈ ಕಾರ್ಯಕ್ರಮ ಎಂಬುದು ಗಮನಕ್ಕೆ ಬರುತ್ತಿದ್ದಂತೆಯೇ ವಿವಿ ಆಡಳಿತ ಅವಕಾಶ ನಿರಾಕರಿಸಿತು. ಆಗ ಅಲ್ಲಿ 'ಭಾರತ್ ತೇರೇ ತುಕಡೇ ಹೋಂಗೇ ಇನ್ಶಾ ಅಲ್ಲಾ ಇನ್ಶಾ ಅಲ್ಲಾ', 'ಭಾರತ್ ಕೀ ಬರ್ಬಾದೀ ತಕ್ ಜಂಗ್ ರಹೇಗೀ' 'ಅಫ್ಜಲ್ ಹಮೇ ಶರ್ಮಿಂದಾ ಹೈ, ತೇರೆ ಕಾನಿಲ್ ಜಿಂದಾ ಹೈ', 'ಹಮ್ ಲಡ್ಕರ್ ಲೇಂಗೇ ಆಜಾದೀ', 'ಕಿತ್ನೇ ಅಫ್ಜಲ್' ಮುಂತಾದ ಭಾರತ ವಿರೋಧಿ ಘೋಷಣೆಗಳು ಮೊಳಗಿದವು. ಎಡಪಕ್ಷಗಳ ಬೆಂಬಲದಿಂದ ಪ್ರಾರಂಭವಾದ ಇಂತಹ ದೇಶವಿರೋಧಿ ಕೃತ್ಯಕ್ಕೆ ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳು ಬೆಂಬಲ ಸೂಚಿಸಿದ್ದವು. ಇದರ ಮುಂದುವರಿದ ಭಾಗ ರಾಮ್ಜಸ್ ಕಾಲೇಜು ಪ್ರಕರಣ.

### ಘಟನೆಯ ಮೂಲ

ಈ ಘಟನಾ ಕ್ರಮದ ಮೂಲ ವಿಶ್ಲೇಷಿಸಿದಾಗ ತಿಳಿಯಾಗುವ ಸಂಗತಿಯೆಂದರೆ ಎಡಪಂಥೀಯ ವಿಚಾರಧಾರೆಯ ವಿದ್ಯಾರ್ಥಿ ಸಂಘಟನೆಗಳು ರಾಮ್ಜಸ್ ಕಾಲೇಜಿನ ತಮ್ಮ ಕಾರ್ಯಕ್ರಮಕ್ಕೆ ಪರವಾನಿಗೆ ಪಡೆಯುವಲ್ಲಿ ವಿಫಲವಾದವು. ಇಂತಹ ಪರಿಸ್ಥಿತಿಯಲ್ಲಿ ಈ ಸಂಘಟನೆಗಳು ಸಾಂಪ್ರದಾಯಿಕವಾಗಿ ನಡೆದುಕೊಳ್ಳುವಂತೆ ಕಾಲೇಜಿನ ಆವರಣದಲ್ಲಿ ಘೋಷಣೆಗಳನ್ನು ಕೂಗುವುದಕ್ಕೂ, ಪ್ರತಿಭಟನೆಗಳಿಗೂ ಮುಂದಾದವು. ಬರುಬರುತ್ತಾ ಈ ಘೋಷಣೆಗಳು ಭಾರತ ವಿರೋಧಿ ಘೋಷಣೆಗಳಾಗಿ ಬದಲಾದವು. ಕಾಲೇಜಿನ ವಾತಾವರಣ ಪ್ರಕ್ಷುಬ್ಧವಾಗುತ್ತಿರುವುದನ್ನು ಕಂಡ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಮಧ್ಯ ಪ್ರವೇಶಿಸಿತು. ಇಂತಹ ಸಂದರ್ಭದಲ್ಲಿ ಯಾವುದೇ ಜವಾಬ್ದಾರಿಯುತ, ದೇಶಪ್ರೇಮಿ ಸಂಘಟನೆಯೊಂದು

### ಈ ಉಮರ್ ಖಾಲಿದ್ ಯಾರು?

ನಮ್ಮ ದೇಶದ ಸಂಸತ್ತಿನ ಮೇಲೆ 2001ರ ಡಿಸೆಂಬರ್ ನಲ್ಲಿ ನಡೆದ ಉಗ್ರರ ದಾಳಿಯ ಸಂಚುಕೋರ 'ಅಫ್ಜ್ಯಲ್ ಗುರು'ವನ್ನು ದೇಶದ್ರೋಹದ ಆರೋಪದಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಗಲ್ಲುಶಿಕ್ಷೆಗೆ ಗುರಿಪಡಿಸಿದ್ದನ್ನು ವಿರೋಧಿಸಿ 2016ರ ಫೆಬ್ರುವರಿಯಲ್ಲಿ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಆವರಣದಲ್ಲಿ ಪರವಾನಿಗೆ ಇಲ್ಲದೇ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದು. ಅದರಲ್ಲಿ ಭಾರತವಿರೋಧಿ ಮತ್ತು ಪಾಕಿಸ್ತಾನದ ಪರವಾದ ಘೋಷಣೆಗಳನ್ನು ಕೂಗಿದ್ದು. ನಂತರ ಪೊಲೀಸ್ ಬಂಧನದ ಭೀತಿಯಿಂದ ಎಲ್ಲರ ಕಣ್ತಪ್ಪಿಸಿ ತಾನು ಓದುತ್ತಿರುವ ವಿದ್ಯಾಲಯದಿಂದ ಓಡಿಹೋಗಿದ್ದು. ದೇಶದ್ರೋಹದ ಆಪಾದನೆಯಲ್ಲಿ ಇನ್ನೇನು ಬಂಧಿತನಾಗುವದು ನಿಶ್ಚಿತ ಎಂಬ ಪರಿಸ್ಥಿತಿಯಲ್ಲಿ 'ಪರಾರಿ ಅಪರಾಧಿ' ಎಂಬ ಹೇವರಿಕೆಯನ್ನು ತಪ್ಪಿಸಿಕೊಳ್ಳಲು ಕಾನೂನಿಗೆ ಶರಣಾಗತನಾಗಿ, ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡು ಇತ್ತೀಚೆಗಷ್ಟೇ ಬಿಡುಗಡೆಯಾಗಿ ಬಂದಿದ್ದು.

ನಡೆದುಕೊಳ್ಳಲೇಬೇಕಾದಂತೆ ಅದು ಕಾಲೇಜಿನ ಆವರಣದಲ್ಲಿ ಪ್ರತ್ಯೇಕತಾವಾದಿಗಳ, ದೇಶವಿರೋಧಿಗಳ ಪ್ರವೇಶವನ್ನು ಕಟುವಾಗಿ ವಿರೋಧಿಸಿದೆ. ಇಲ್ಲಿ ಯಾವುದೇ ವೈಚಾರಿಕತೆ ಅಥವಾ ವಿಚಾರಧಾರೆಗಳ ಅಳತೆಗೋಳಿಲ್ಲದೇ ದೇಶವಿರೋಧಿ ಮತ್ತು ಸಮಾಜವಿರೋಧಿ ತತ್ವಗಳಿಂದ ವಿದ್ಯಾಲಯದ ಪರಿಸರ ಹಾಳಾಗದಂತೆ ಕಾಪಾಡುವುದು ಮತ್ತು ವಿದ್ಯಾರ್ಥಿಗಳು ಧೃತಿಗೆಡದಂತೆ ನೋಡಿಕೊಳ್ಳುವುದನ್ನೇ ತನ್ನ ಕರ್ತವ್ಯವಾಗಿ ಅದು ಭಾವಿಸಿದೆ. ಪರಿಸ್ಥಿತಿ ತೀರಾ ಕೈಮೀರಿದಾಗ ತಿಕ್ಕಾಟಕ್ಕೆ ತೊಡಗಿದ ತನ್ನ ಇಬ್ಬರು ಕಾರ್ಯಕರ್ತರನ್ನು ಅಮಾನತ್ತುಗೊಳಿಸಿರುವುದು ಪರಿಷತ್ತಿನ ಪ್ರಜಾಪ್ರಭುತ್ವಪರ ಮತ್ತು ಹಿಂಸಾವಿರೋಧಿ ನಿಲುವನ್ನು ಸ್ಪಷ್ಟಪಡಿಸುತ್ತದೆ.

ಸತ್ಯಸಂಗತಿ ಎಂದರೆ ನಮ್ಮ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ವಿವಿಧ ಸ್ತರದ ಅನೇಕ ಪಠ್ಯಪುಸ್ತಕ ಸಲಹಾ ಮಂಡಳಿ ಹಾಗು ರಚನಾ ಸಮಿತಿಗಳು, ಸರ್ಕಾರಿ ಕೃಪಾಪೋಷಿತ ಸಂಶೋಧನಾ ಸಂಸ್ಥೆಗಳು, ಉಚ್ಚ ಶೈಕ್ಷಣಿಕ ಸಂಸ್ಥೆಗಳ ಆಯಕಟ್ಟಿನ ಜಾಗಗಳು ಸ್ವಾತಂತ್ರ್ಯನಂತರದ ಕಾಲದಿಂದಲೂ ಎಡಪಂಥೀಯ ವಿಚಾರಧಾರೆಯನ್ನೇ ಅವಲಂಬಿಸಿರುವವರ ಆಶ್ರಯತಾಣಗಳಾಗಿದ್ದವು. ಈ ವಿಚಾರಧಾರೆಯ ಕಾರ್ಯಪ್ರನಾಳಿಯ ಸಾಮಾನ್ಯ ಪರಿಚಯವಿರುವವರಿಗೂ ಸ್ಪಷ್ಟವಾಗಿ ತಿಳಿದಿರುವ ವಿಚಾರವೆಂದರೆ, ತಮ್ಮ ವೈಚಾರಿಕತೆಗೆ ಸಹಮತಿ ಇಲ್ಲದವರೊಡನೆ ಸಹಬಾಳ್ವೆ ನಡೆಸುವ ಗುಣ ಈ ಸಂಘಟನೆಗಳದ್ದಲ್ಲ ಎಂಬುದು.

ತಾವು ಸದಾಕಾಲ ಬಡಬಡಿಸುವ ವಾಕ್ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯದಂತಹ ಕಲ್ಪನೆಗಳು ತಮ್ಮಷ್ಟೇ ತಮ್ಮ ವಿರೋಧಿಬಣಕ್ಕೂ ಅನ್ವಯಿಸುತ್ತವೆ ಎಂಬ ಸತ್ಯ ಎಡರಂಗದ ರಾಜಕೀಯ ಕ್ಷೇತ್ರದಲ್ಲಿರುವವರಿಗೇ ಇರಲಿ ವಿದ್ಯಾರ್ಥಿಕ್ಷೇತ್ರದಲ್ಲಿರುವ ಎಡಪಂಥೀಯರಿಗಾಗಲಿ ಅರಿವಿಗೇ ಬರುವುದಿಲ್ಲ. ತಮ್ಮ ಪಟ್ಟಭದ್ರ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಯಾವುದೇ ಲಕ್ಷಣಗಳು ಕಂಡುಬಂದಲ್ಲಿ ಅವು ಮೊದಲಿಗೆ ಮಾಡುವ ಕೆಲಸವೇ ಬಾಹುಬಲದ ಪ್ರದರ್ಶನದ್ದು ಮತ್ತು ತಮ್ಮ ವಿರೋಧಿಗಳ ಮೂಲೋತ್ಪಾಟನೆಯದ್ದು.

ಬದಲಾದ ಇಂದಿನ ಪರಿವೇಶದಲ್ಲಿ ಎಡಪಂಥೀಯ ವಿಚಾರಧಾರೆಯೇ ಅಸ್ತಿತ್ವಕಳೆದುಕೊಂಡಿರುವಾಗ ಅದನ್ನೇ ನಂಬಿ ಉಸಿರಾಡುವ ಸಂಘಟನೆಗಳು ತಮ್ಮ ಹಿಡಿತದಲ್ಲಿರುವ ಅಳಿದುಳಿದ ಆಶ್ರಯತಾಣಗಳನ್ನೇ ಭದ್ರಪಡಿಸಿಕೊಳ್ಳಲು ಶತಾಯಗತಾಯ ಪ್ರಯತ್ನಮಾಡುವುದು ಅನಪೇಕ್ಷಣೀಯವೇನಲ್ಲ. ರಾಮ್ಜಸ್ ಕಾಲೇಜಿನ ಘಟನಾವಳಿಯೂ ಸಹ ಎಡಪಂಥೀಯ ವಿದ್ಯಾರ್ಥಿಸಂಘಟನೆಗಳು ತಮ್ಮ ಅಸ್ತಿತ್ವದ ಉಳಿವಿಗಾಗಿ ನಡೆಸುತ್ತಿರುವ ಹತಾಶ ಪ್ರಯತ್ನಗಳ ಸರಣಿಯಲ್ಲಿಯೇ ಬರುವಂತಹದು. ಆದರೆ ಇಂತಹ ಪ್ರಯತ್ನಗಳಲ್ಲಿ ತೊಡಗುವವರು ಮತ್ತು ಅದಕ್ಕೆ ತಮ್ಮ ಸಮರ್ಥನೆಯನ್ನು ಕೊಡುವವರು ನಿಚ್ಚಳವಾಗಿ ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ ಅಸಮಾನತೆಗೆ– ಹಿಂಸೆಗೆ ವಿದ್ಯಾಲಯಗಳಲ್ಲಿ, ವಿದ್ಯಾರ್ಥಿ ಜೀವನದಲ್ಲಿ ಅವಕಾಶವಿರಕೂಡದು ಎಂಬ ವಿಚಾರಕ್ಕೆ ಹೇಗೆ ವಿರೋಧಭಾವ ಹೊಂದುವದು ಸಾಧ್ಯವಿಲ್ಲವೋ ಹಾಗೆಯೇ ಅದೇ ವಿದ್ಯಾಲಯಗಳಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ರಾಷ್ಟ್ರವಿರೋಧಿ, ಸಮಾಜವಿರೋಧಿ, ಪ್ರತ್ಯೇಕತಾ ಭಾವಗಳ ಬೆಳವಣಿಗೆಗೂ ಆಸ್ಪದವಿರಕೂಡದು ಎನ್ನುವ ಭಾವಕ್ಕೂ ವಿರೋಧಸಲ್ಲದು. ವ್ಯಕ್ತಿ ಸ್ವಾತಂತ್ರ್ಯದ ಮರೆಯಲ್ಲಿ, ವೈಯಕ್ತಿಕ ಹಕ್ಕುಗಳ ಹೆಸರಿನಲ್ಲಿ ಭಾರತದ ವಿಭಜನೆಯ ಕನಸು ಕಾಣುವವರನ್ನೂ ಸಹ ಕಾಶ್ಮೀರದ ವಿಷಯವನ್ನು ಅಂತರ್‌ರಾಷ್ಟ್ರೀಯ ಸಮಸ್ಯೆ ಎಂಬಂತೆ ಬಿಂಬಿಸುವ ಪಾಕಿಸ್ತಾನ ನಡೆಸುವ ಹುನ್ನಾರದ ಭಾಗವಾಗಿಯೇ ಕಾಣಬೇಕು. ರಾಷ್ಟ್ರದ ಐಕ್ಯತೆಯ ಸಮಗ್ರತೆಯ ವಿಷಯದಲ್ಲಿ ಬಿಡಿಗಾಸಿನ ಚೌಕಾಶಿ ಇಲ್ಲದ ಮನೋಭಾವ ತಳೆಯಲೇಬೇಕು.



**ಹೆಸರು:** ಖರಿಯರ್

**ಮೂಲ:** ಒರಿಸ್ಸಾದ ನೌಪಾಡ ಜಿಲ್ಲೆ

**ವಿಭಾಗ:** ಉಭಯ ತಳಿ. ಅತಿ ಕಡಿಮೆ ಹಾಲು ಉತ್ಪತ್ತಿ ಮಾಡುತ್ತದೆ.

**ವಿಶೇಷತೆ:** ಬರ ಪ್ರದೇಶ ಹಾಗೂ ಅತ್ಯುಷ್ಣ ಪ್ರದೇಶದಲ್ಲಿ ಅತಿಕಡಿಮೆ ಖರ್ಚಿನಲ್ಲಿ ಸಾಕಬಹುದಾದ ತಳಿ.

# ಕೃಷಿ ಮಾಹಿತಿಯ ಕಣಜ ಈ ಎಂಜಿನಿಯರ್

ನೆಲದ ಮಾತು

ಬಾಗಲಕೋಟೆ ಜಿಲ್ಲೆಯನ್ನು ಕಬ್ಬು ಬೆಳೆ ಆವರಿಸಿಕೊಂಡಿದೆ. ಇಲ್ಲಿನ ರೈತಪರ ಹೋರಾಟಗಳೆಲ್ಲ ಕಬ್ಬು ಬೆಳೆಗಾರರಿಗೇ ಸೀಮಿತ. ಇಂಥವರ ಮಧ್ಯೆ ಇಲ್ಲೊಬ್ಬ ಯುವಕ ಬೇರೆ ಬೆಳೆಗಳನ್ನು ಬೆಳೆಸಿರುವುದು ಮಾತ್ರವಲ್ಲದೇ ತಮ್ಮ ಮನೆಯನ್ನೇ ಕೃಷಿ ಮಾಹಿತಿ ಕೇಂದ್ರವನ್ನಾಗಿಸಿ ಎಲ್ಲರ ಹುಬ್ಬೇರಿಸಿದ್ದಾರೆ.

ಈ ಯುವಕನ ಹೆಸರು ಬಸನಗೌಡ ವೆಂಕನಗೌಡ ಪೊಲೀಸ್ ಪಾಟೀಲ. ಬಿ.ಇ. ಮೆಕ್ಯಾನಿಕಲ್‌ನಲ್ಲಿ ರ್‍ಯಾಂಕ್ ವಿಜೇತ. ಪ್ರತಿಷ್ಠಿತ ಕಂಪೆನಿಯಲ್ಲಿ ನೌಕರಿ ಪಡೆದುಕೊಳ್ಳುವ ಅವಕಾಶವೂ ಒದಗಿಬಂದಿತ್ತು. ಆದರೆ 'ಅಂಥ ನೌಕರಿಗಳು ಗುಲಾಮಗಿರಿ ಇದ್ದಂತೆ' ಎನ್ನುತ್ತಲೇ ಕೃಷಿಯಲ್ಲಿ ತೊಡಗಿಸಿಕೊಂಡವರು. ಇಂದು ಕೃಷಿ ಕ್ಷೇತ್ರದ ಮಹತ್ವದ ವಿಷಯಗಳು ಮಾಹಿತಿಗಳು ಇವರ ಬಳಿ ಲಭ್ಯವಿವೆ. ಸುಮಾರು 180 ಕೃಷಿ ಪಂಡಿತರ ಅಲ್ಬಮ್ ಇವರ ಬಳಿ ಇದೆ. ರಾಜ್ಯದಲ್ಲಿರುವ ಮತ್ತು ಪಕ್ಕದ ರಾಜ್ಯಗಳಲ್ಲಿರುವ ಯಶಸ್ವಿ ಕೃಷಿಕರ ಸಂಪೂರ್ಣ ಮಾಹಿತಿ, ಅವರು ಯಾವ ಬೆಳೆಗಳಲ್ಲಿ ಪರಿಣತರು, ಪ್ರತಿ ಎಕರೆಗೆ ಎಷ್ಟು ಫಸಲು ತೆಗೆಯುತ್ತಾರೆ, ಯಾವ ಸಮಯದಲ್ಲಿ ಬಿತ್ತನೆ ಮಾಡುತ್ತಾರೆ, ಯಾವ ಗೊಬ್ಬರ ಬಳಸುತ್ತಾರೆ ಎಂಬಿತ್ಯಾದಿ ಸಮಗ್ರ ಮಾಹಿತಿಯನ್ನು ಕಲೆ ಹಾಕಿರುವ ಇವರು, ಯಶಸ್ವಿ ಕೃಷಿಕರ ಸಂಪೂರ್ಣ ವಿಳಾಸದ ಜೊತೆ ಅಂಥ ಕೃಷಿಕರ ಸಾಧನೆಗಳನ್ನೂ ಸಂಗ್ರಹಿಸಿದ್ದಾರೆ. ಬೇರೆ ಬೇರೆ ಕೃಷಿ ಆಧಾರಿತ ಮೂರು ಸಾವಿರಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹ ಇವರ ಬಳಿ ಇದೆ. ಕೃಷಿಯಲ್ಲಿ ಹೊಸ ತಂತ್ರಜ್ಞಾನ, ನಾಟಿಪದ್ಧತಿಗಳು, ನೀರು ಪೋಲಾಗದಂತೆ ಬೆಳೆ ಬೆಳೆಯುವ ವಿಧಾನಗಳು, ಸರ್ಕಾರದಿಂದ ಕೃಷಿಗೆ ಲಭಿಸುವ ಸೌಲಭ್ಯಗಳ ಮಾಹಿತಿಗಳೂ ಇವರಲ್ಲಿ ಲಭ್ಯ.



ತಮ್ಮ ಗ್ರಾಮದ ಕೃಷಿಕರಿಗೆ ಕೃಷಿಯಲ್ಲಿ ಹೊಸ ಪ್ರಯೋಗಗಳನ್ನು ಮಾಡಿಸಿದ ಬಸನಗೌಡರು, ಸುಮಾರು 20 ಕೃಷಿಕರ ಹೊಲಗಳಲ್ಲಿ ಶೇಡ್ ಹೌಸ್‌ಗಳನ್ನು ನಿರ್ಮಿಸಿ ವಿನೂತನ ಕೃಷಿ ಮಾಡಲು ತೊಡಗಿಸಿದ್ದಾರೆ. ಮಲ್ಚಿಂಗ್‌ಪೇಪರ್ ಬಳಸಿ ಕಡಿಮೆ ನೀರು ಬಳಸಿ ಮಾಡುವ ಕೃಷಿ ಹೀಗೆ ಹತ್ತು ಹಲವು ಪ್ರಯೋಗಗಳನ್ನು ಮೊದಲು ತಾವು ಮಾಡಿ ನಂತರ ತಮ್ಮ ಗ್ರಾಮದ ಯುವಕರನ್ನೂ ಪ್ರೋತ್ಸಾಹಿಸುತ್ತಾರೆ. ಬಹುತೇಕ ಕೃಷಿ ವಿಜ್ಞಾನಿಗಳು ಇವರೊಂದಿಗೆ ಸಂಪರ್ಕದಲ್ಲಿದ್ದು, ಯಾವುದೇ ರೈತರು ತಮ್ಮ ಬಳಿ ಮಾಹಿತಿಗಾಗಿ ಬಂದರೆ ಬಸನಗೌಡರ ಬಳಿ ಕಳಿಸುತ್ತಾರೆ. ಬಸನಗೌಡರ ಬಳಿ 29 ಎಕರೆ ಜಮೀನು ಇದ್ದು, ಅದರಲ್ಲಿ ಮೆಣಸಿನಕಾಯಿ, ಬೆಂಡೆ, ಕಲ್ಲಂಗಡಿ, ಕಡಲೆ, ಕಬ್ಬು, ಗೋವಿನಜೋಳ ಹೀಗೆ ಹಲವಾರು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಹೂಕೋಸು ಮತ್ತು ಎಲೆಕೋಸು ಬೆಳೆಯುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಅನವಶ್ಯಕವಾಗಿ ನೀರು ಪೋಲಾಗಬಾರದಂತೆ ತಂತ್ರಜ್ಞಾನ ಅಳವಡಿಸಿದ್ದಾರೆ.

ಸಂಪರ್ಕ: 7619442348. (ಕೃಪೆ: ಪ್ರಜಾವಾಣಿ)

## ಸಹಕಾರ ತತ್ವದ ಮೇಲೆ ರೂಪಗೊಂಡ ಆದರ್ಶ ಗ್ರಾಮ

ಮನೆ ಮನೆಗೆ ಶುದ್ಧ ಕುಡಿಯುವ ನೀರು ಸರಬರಾಜು, ಎಲ್ಲ ಕಾಲದಲ್ಲೂ ಕೋಲ್ಡ್‌ವಾಟರ್ ಲಭ್ಯ, ಗಲ್ಲಿಗಲ್ಲಿಯಲ್ಲೂ ಕಸ ಸಂಗ್ರಹಿಸಲು ವಾಹನ, ವಿಶಾಲ ರಸ್ತೆಗಳು, ಮನೆಗಳ ಮುಂದಿನ ರಸ್ತೆಗಳಲ್ಲಿ ಟೈಲ್ಸ್ ಅಳವಡಿಕೆ, ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ನಡೆಯುವ ಸಭೆ ಟಿ.ವಿ.ಯಲ್ಲಿ ನೇರಪ್ರಸಾರ, ಸಾರ್ವಜನಿಕರಿಗೆ ಅನುಕೂಲವಾಗುವ ಎಲ್ಲ ವಿಷಯ ಧ್ವನಿವರ್ಧಕದ ಮೂಲಕ ಅನೌನ್ಸ್‌ಮೆಂಟ್, ಬ್ಯಾಂಕ್‌ನಂತಿರುವ ಪಂಚಾಯ್ತಿ ಕಚೇರಿ, ಎಲ್ಲ ವ್ಯವಹಾರವೂ ಗಣಕೀಕೃತ. ಜನಪ್ರತಿನಿಧಿಗಳು, ನೌಕರರು ಹಾಗೂ ಸಿಬ್ಬಂದಿಯ ದೂರವಾಣಿ ಸಂಖ್ಯೆಯ ಮಾಹಿತಿ ಫಲಕ.

ಇದು ಯಾವುದೋ ನಗರದ ಬಡಾವಣೆಯ ಚಿತ್ರಣವಲ್ಲ. ರಾಜ್ಯದ ಗಡಿಯಲ್ಲಿರುವ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಚಿತ್ರಣ.

ಗ್ರಾಮದ ಜನರು, ಜನಪ್ರತಿನಿಧಿಗಳು, ಪಂಚಾಯ್ತಿಯ ಅಧಿಕಾರಿ–ಸಿಬ್ಬಂದಿ ಸಹಕಾರ ಹಾಗೂ ಶ್ರಮದಿಂದ ಶಿರಗುಪ್ಪಿ ಗ್ರಾಮವಿಂದು ನಗರದ ಮಟ್ಟಕ್ಕೆ ಬೆಳೆದ ಮಾದರಿಯಾಗಿದೆ. ರಾಜ್ಯದ ಗ್ರಾಮಾಭಿವೃದ್ಧಿ ಸಂಸ್ಥೆಗಳು, ಅಂತರರಾಜ್ಯ ಸ್ಥಳೀಯ ಸಂಸ್ಥೆಗಳಷ್ಟೇ ಅಲ್ಲದೇ ವಿದೇಶಿಯರ ಗಮನ ಸೆಳೆದಿದೆ.

ಹತ್ತನ್ನೊಂದು ವರ್ಷಗಳ ಹಿಂದಿನ ಮಾತು. ಗ್ರಾಮದ ಎಲ್ಲೆಂದರಲ್ಲಿ ತಿಪ್ಪೆಗಳು, ಮಣ್ಣಿನಿಂದ ಕೂಡಿದ ಕಿರಿದಾದ ರಸ್ತೆಗಳು, ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯ ಮೇಲೆಯೇ ಹರಿಯುತ್ತಿರುವ ಕೊಳಚೆ ನೀರು, ಕುಡಿಯುವ ನೀರಿಗೆ ತತ್ವಾರವಿತ್ತು. ಹಂತ ಹಂತವಾಗಿ ಸುಧಾರಣೆ 'ನೆಲೆ' ಕಂಡಿರುವ ಈ ಗ್ರಾಮದಲ್ಲಿ ಈಗಿನ ಪರಿಸ್ಥಿತಿಯೇ ಬದಲಾಗಿದೆ. ಮನಸ್ಸು ಮಾಡಿದರೆ ಸಹಕಾರ ತತ್ವದ ಮೇಲೆ ಮಹಾತ್ಮ ಗಾಂಧಿ ಕಂಡ ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಬಹುದು ಎನ್ನುವುದನ್ನು ಸಾಬೀತುಪಡಿಸಿದೆ. ತಂತ್ರಜ್ಞಾನ ಬಳಕೆ ಮೂಲಕ, ಜನರ ಬವಣೆಗಳಿಗೆ ಪರಿಹಾರ ದೊರಕಿಸುವ ಪ್ರಯತ್ನ ಮಾಡಲಾಗಿದೆ.

ಜಿಲ್ಲಾ ಕೇಂದ್ರ 102 ಕಿ.ಮೀ. ಹಾಗೂ ಅಥಣಿ ತಾಲ್ಲೂಕು ಕೇಂದ್ರದಿಂದ 45 ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಹಿಂದೂ, ಮುಸ್ಲಿಮರು ಹಾಗೂ ಜೈನರು ಸೇರಿದಂತೆ 9,683 ಜನಸಂಖ್ಯೆ ಇದೆ. ಅಂಚೆ ಕಚೇರಿ, ದೂರವಾಣಿ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಕರ ವಸೂಲಿಯಲ್ಲಿ ಶೇ 100ರಷ್ಟು ಸಾಧನೆಯಾಗುತ್ತಿದೆ. ಕನ್ನಡ, ಮರಾಠಿ, ಉರ್ದು, ಇಂಗ್ಲಿಷ್ ಮಾಧ್ಯಮದ ಶಾಲೆಗಳಿದ್ದು 1ರಿಂದ10ನೇ ತರಗತಿವರೆಗೆ ಶಿಕ್ಷಣ ನೀಡಲಾಗುತ್ತಿದೆ. ಕೆಎಲ್‌ಇ ಸಂಸ್ಥೆಯು ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನಿಂದ ಕಾಲೇಜು ಶಿಕ್ಷಣವೂ ದೊರೆಯುತ್ತಿದೆ.

ಕಬಡ್ಡಿ ಆಟಕ್ಕೆ ಪ್ರಸಿದ್ಧಿಯಾಗಿರುವ ಶಿರಗುಪ್ಪಿಯಲ್ಲಿ ರಾಷ್ಟ್ರಮಟ್ಟದ, ರಾಜ್ಯಮಟ್ಟದ ಮಹಿಳಾ ಹಾಗೂ ಪುರುಷರ ಪಂದ್ಯಾವಳಿ ನಡೆಸಲಾಗುತ್ತದೆ. ವಾಲಿಬಾಲ್‌ನಲ್ಲೂ ಹೆಸರು ಮಾಡಿದೆ. ಎಲ್ಲ ಮಹಾಪುರುಷರ ಜಯಂತಿ ಸಂಭ್ರಮದಿಂದ ಆಚರಿಸಲಾಗುತ್ತದೆ. ಮಹಿಳಾ ಸಬಲೀಕರಣಕ್ಕೂ ಆದ್ಯತೆ ನೀಡಲಾಗಿದೆ. ಸ್ತ್ರೀಶಕ್ತಿ ಗುಂಪು, ಯುವಕ ಮಂಡಳ, ಸ್ವಸಹಾಯ ಸಂಘಗಳು ಸೇರಿ 54 ಗುಂಪುಗಳಿವೆ. 35 ಸಂಘಗಳಿಗೆ ಸುತ್ತಿನಿಧಿ ನೀಡಲಾಗಿದೆ. ಈ ಗುಂಪುಗಳು ಆರೋಗ್ಯ ಕಾರ್ಯಕ್ರಮ, ಗ್ರಾಮಸಭೆ, ಉದ್ಯೋಗ ಖಾತ್ರಿ ಯೋಜನೆ ಮೊದಲಾದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿವೆ.

ಗ್ರಾಮ ನೈರ್ಮಲ್ಯ ಹಾಗೂ ವೈಯಕ್ತಿಕ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಒಟ್ಟು 2741 ಕುಟುಂಬಗಳ ಪೈಕಿ ಬಹುತೇಕರಿಗೆ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಡಲಾಗಿದೆ. ಗ್ರಾಮದ ಸೌಲಭ್ಯ, ನೈರ್ಮಲ್ಯ ಹಾಗೂ ವ್ಯವಸ್ಥೆಗಾಗಿ 2010 ರಿಂದ ಈವರೆಗೆ ಅಂತರರಾಷ್ಟ್ರೀಯ ಗೂಗಲ್ ಪ್ರಶಸ್ತಿ, ರಾಷ್ಟ್ರೀಯ ಸುರಕ್ಷಾ ಗ್ರಾಮ ಸಭಾ ಪ್ರಶಸ್ತಿ ಸೇರಿದಂತೆ ಒಟ್ಟು 8 ಪ್ರಶಸ್ತಿಗಳು ದೊರೆತಿವೆ. ಶಿರಗುಪ್ಪಿ ಗ್ರಾಮ ಪಂಚಾಯ್ತಿಯಲ್ಲಿ ಹಲವು ವರ್ಷಗಳ ಹಿಂದಿನಿಂದಲೇ ನಗದುರಹಿತ ವ್ಯವಹಾರವನ್ನು ಜಾರಿಗೆ ತರಲಾಗಿತ್ತು. (ಕೃಪೆ: ಪ್ರಜಾವಾಣಿ)

ಸಂಪಾದಕೀಯ ಸಹಕಾರ ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ಸಿಂಧು ನದಿ ನೀರು ಒಪ್ಪಂದದ ಅನ್ವಯ ಭಾರತದ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಮುಂದಾಗಿರುವ ಭಾರತ ಶಹಾಪುರ್ ಕಂಡಿ ಅಣೆಕಟ್ಟು ಯೋಜನೆಯನ್ನು ಮತ್ತೆ ಪ್ರಾರಂಭಿಸಲು ನಿರ್ಧರಿಸಿದೆ. 206 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಉದ್ದೇಶದಿಂದ 1999ರ ಮೇನಲ್ಲಿ ಈ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಆ ನಂತರ ಜಮ್ಮು ಮತ್ತು ಕಾಶ್ಮೀರ ಹಾಗೂ ಪಂಜಾಬ್ ಸರ್ಕಾರದ ನಡುವೆ ಭಿನ್ನಾಭಿಪ್ರಾಯದಿಂದಾಗಿ 2014ರಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಿದ್ದು, ಎರಡೂ ಸರ್ಕಾರಗಳು ಒಪ್ಪಿಗೆ ಸೂಚಿಸಿವೆ.



**ಪಾಕಿಸ್ತಾನ ಜತೆಗಿನ ಅಂತರರಾಷ್ಟ್ರೀಯ ಗಡಿಯಲ್ಲಿ ಅಮೃತಸರ ಸಮೀಪ ಅಟ್ಟಾರಿಯಲ್ಲಿ ಭಾರತ ದೇಶದ ಅತ್ಯಂತ ದೊಡ್ಡ ಧ್ವಜಸ್ತಂಭವನ್ನು ಸ್ಥಾಪಿಸಿದೆ. ಈ ಸ್ತಂಭವು 360 ಅಡಿ (110 ಮೀಟರ್) ಎತ್ತರವಿದೆ. 120 ಅಡಿ ಉದ್ದ ಹಾಗೂ 80 ಅಡಿ ಅಗಲವಿರುವ ಈ ಧ್ವಜವು ದೇಶದ ಅತ್ಯಂತ ದೊಡ್ಡ ಧ್ವಜ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದೆಹಲಿಯಲ್ಲಿರುವ ಕುತುಬ್ ಮಿನಾರ್‌ಗಿಂತ 30 ಮೀಟರ್ ಎತ್ತರವಿರುವ ಈ ಧ್ವಜಸ್ತಂಭವು ಅಟ್ಟಾರಿ–ವಾಘಾ ಗಡಿಯಿಂದ ಸುಮಾರು 20 ಕಿ.ಮೀ ದೂರದಲ್ಲಿರುವ ಅಮೃತಸರ ಮತ್ತು ಲಾಹೋರ್‌ಗೆ ಕಾಣಿಸುತ್ತದೆ. ಗಡಿಯಿಂದ ಕೇವಲ 200 ಮೀಟರ್ ದೂರದಲ್ಲಿರುವ ಈ ಸ್ತಂಭದ ಮೂಲಕ ಭಾರತ ಪಾಕಿಸ್ತಾನದ ಮೇಲೆ ಹದ್ದಿನ ಕಣ್ಣೀಡಲು ಪ್ರಯತ್ನಿಸುತ್ತಿದೆ ಎಂದು ಪಾಕಿಸ್ತಾನ ಆಕ್ಷೇಪ ಎತ್ತಿದೆ. ಬಿಎಸ್‌ಎಫ್ ಜತೆ ನಡೆದ ಸಭೆಯಲ್ಲಿ ಭದ್ರತೆ ಮತ್ತು ಕಣ್ಗಾವಲಿಗೆ ಸಂಬಂಧಿಸಿ ಸಮಸ್ಯೆಗಳು ಎದುರಾಗುತ್ತವೆ ಎಂದು ಪಾಕ್ ರೇಂಜರ್ಸ್ ಅಧಿಕಾರಿಗಳು ಆಕ್ಷೇಪಿಸಿತ್ತು. ಈ ಆಕ್ಷೇಪ ಆಧಾರರಹಿತ ಎಂದು ಬಿಎಸ್‌ಎಫ್ ತಳ್ಳಿ ಹಾಕಿದೆ.**




ಜಾರ್ಖಂಡ್‌ನಲ್ಲಿ ಪಾಲಿಥೀನ್ ಕವರ್‌ಗಳ ಬಳಕೆಯನ್ನು ಶೀಘ್ರದಲ್ಲಿ ನಿಷೇಧಿಸುವುದಾಗಿ ಮುಖ್ಯಮಂತ್ರಿ ರಘುಧರ್ ದಾಸ್ ತಿಳಿಸಿದ್ದಾರೆ. ಪಾಲಿಥೀನ್‌ನ ಅಸಮರ್ಪಕ ನಿರ್ವಹಣೆಯಿಂದಾಗಿ ಪ್ರಾಣಿಗಳು ಸಾವೀಗೀಡಾಗುತ್ತಿವೆ. ಇನ್ನು ಮಂದೆ ಪಾಲಿಥೀನ್ ಬಳಸುವವರನ್ನು ಜೈಲು ಶಿಕ್ಷೆಗೆ ಗುರಿಪಡಿಸಲಾಗುವುದು. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗುತ್ತಿದ್ದು ಸಾಧ್ಯವಾದಷ್ಟು ಬೇಗನೆ ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.



**2050ನೇ ಇಸವಿ ವೇಳೆಗೆ ಭಾರತ ವಿಶ್ವದಲ್ಲೇ ಅತ್ಯಂತ ಹೆಚ್ಚು ಮುಸ್ಲಿಂ ಜನಸಂಖ್ಯೆ ಇರುವ ರಾಷ್ಟ್ರವಾಗಲಿದೆ ಎಂದು ಅಮೆರಿಕದ ಚಿಂತಕರ ಚಾವಡಿ ಪ್ಯೂ ರಿಸರ್ಚ್ ತಿಳಿಸಿದೆ. ಪ್ರಸ್ತುತ ಇಂಡೋನೇಷ್ಯಾ ವಿಶ್ವದಲ್ಲಿ ಅತ್ಯಂತ ಹೆಚ್ಚು ಮುಸ್ಲಿಂ ಜನಸಂಖ್ಯೆ ಇರುವ ದೇಶವಾಗಿದೆ. ಇದೀಗ ಭಾರತದಲ್ಲಿ 17 ಕೋಟಿ ಮುಸ್ಲಿಮರು ವಾಸವಾಗಿದ್ದು, 2050ರ ವೇಳೆಗೆ 300 ಮಿಲಿಯನ್ (30 ಕೋಟಿ) ಜನಸಂಖ್ಯೆಯೊಂದಿಗೆ ಭಾರತ ವಿಶ್ವದಲ್ಲೇ ಅತ್ಯಂತ ಹೆಚ್ಚು ಮುಸ್ಲಿಮ್ ಜನರಿರುವ ದೇಶ ಎನಿಸಿಕೊಳ್ಳಲಿದೆ ಎಂದು ವರದಿ ತಿಳಿಸಿದೆ. ಪ್ರಸ್ತುತ ಕ್ರೈಸ್ತರ ನಂತರದ 2ನೇ ದೊಡ್ಡ ಧಾರ್ಮಿಕ ಸಮುದಾಯವಾಗಿರುವ ಇಸ್ಲಾಂ 2010ರ ಲೆಕ್ಕಾಚಾರದಂತೆ ಜಗತ್ತಿನಲ್ಲಿ 1.6 ಬಿಲಿಯನ್(160 ಕೋಟಿ) ಮುಸ್ಲಿಮರಿದ್ದಾರೆ. ಇದು ಜಾಗತಿಕ ಜನಸಂಖ್ಯೆಯ ಶೇ. 23ರಷ್ಟಾಗಿದೆ. 2050ರ ವೇಳೆಗೆ ಮುಸ್ಲಿಮರ ಸಂಖ್ಯೆ 2.8 ಬಿಲಿಯನ್‌ಗೆ (280 ಕೋಟಿ) ತಲುಪಲಿದೆ ಎಂದು ವರದಿ ತಿಳಿಸಿದೆ.**

# ಸಾಲುದ್ದದ ಸುದ್ದಿಗಳು

ದೇಶೀಯ ಪಾನೀಯಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ತಮಿಳುನಾಡು ರಾಜ್ಯಾದ್ಯಂತ ಬಹುರಾಷ್ಟ್ರೀಯ ಪಾನೀಯಗಳಾದ ಕೋಕೊ ಕೋಲಾ ಹಾಗೂ ಪೆಪ್ಸಿ ಮಾರಾಟವನ್ನು ವರ್ತಕರು ಸ್ಥಗಿತಗೊಳಿಸಿದ್ದಾರೆ. ತಮಿಳುನಾಡು ವ್ಯಾಪಾರಿಗಳ ಸಂಘಗಳ ಒಕ್ಕೂಟ ಹಾಗೂ ತಮಿಳುನಾಡು ವ್ಯಾಪಾರಿಗಳ ಸಂಘಗಳ ವೇದಿಕೆ ಈ ನಿಷೇಧಕ್ಕೆ ಕರೆ ನೀಡಿದ್ದು, ಇದಕ್ಕೆ 20 ಲಕ್ಷಕ್ಕೂ ಹೆಚ್ಚು ವರ್ತಕರು ಹಾಗೂ ಜನರು ಬೆಂಬಲ ವ್ಯಕ್ತಪಡಿಸಿದ್ದಾರೆ. ಅನೇಕ ಜನರು ಪೆಪ್ಸಿ, ಕೋಲಾವನ್ನು ಬೀದಿಗೆ ಸುರಿದು ಹೋರಾಟಕ್ಕೆ ಬೆಂಬಲ ಸೂಚಿಸಿದರು. ಇದರಿಂದ ಕೋಕೊ ಕೋಲಾ ಹಾಗೂ ಪೆಪ್ಸಿ ಸಂಸ್ಥೆಗಳ ವ್ಯಾಪಾರ ಶೇ.50ರಷ್ಟು ಕಡಿಮೆಯಾಗಲಿದ್ದು, ವಾರ್ಷಿಕ 1,400 ಕೋಟಿಯಷ್ಟು ನಷ್ಟ ಉಂಟಾಗಲಿದೆ. ಈ ಸಂಸ್ಥೆಗಳು ಪಾನೀಯ ತಯಾರಿಕೆಗೆ ನದಿಯ ನೀರನ್ನು ಅತಿಯಾಗಿ ಬಳಸುತ್ತಿದ್ದು, ಇದರಿಂದ ರೈತರ ಕೃಷಿ ಭೂಮಿಯ ನೀರಾವರಿಗೆ ಹೊಡೆತ ಬೀಳುತ್ತಿದೆ. ಅಂತರ್ಜಲ ಕುಸಿತ ಉಂಟಾಗಿದೆ. ಅಲ್ಲದೆ, ಅದರಲ್ಲಿ ಹೆಚ್ಚಿನ ಸಕ್ಕರೆ ಹಾಗೂ ರಾಸಾಯನಿಕಗಳನ್ನು ಬಳಸುವುದರಿಂದ ಆರೋಗ್ಯಕ್ಕೆ ಹಾನಿಕರ. ಅದರ ಬದಲಿಗೆ ನಾವು ದೇಸಿ ಪಾನೀಯಗಳಿಗೆ ಬೆಂಬಲ ನೀಡಿ ರೈತರಿಗೆ ನೆರವಾಗಬೇಕು ಎಂದು ಸಂಘಗಳು ಕರೆ ನೀಡಿವೆ.






**ನದಿಗಳ ಮಾಲಿನ್ಯದ ತೀವ್ರತೆಯನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್ ಸಂಸ್ಕರಿಸದ ತ್ಯಾಜ್ಯ ನೀರನ್ನು ಕೈಗಾರಿಕಾ ಘಟಕಗಳು ನದಿ, ಕೆರೆಗಳಿಗೆ ಹರಿಯಲು ಬಿಡುವುದನ್ನು ತಡೆಗಟ್ಟಲು 3 ತಿಂಗಳ ಕಾಲಾವಕಾಶ ನೀಡಿದೆ. ಈ 3 ತಿಂಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳು ಕಾರ್ಯಾರಂಭಿಸದಿದ್ದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿ ನಿರ್ದಾಕ್ಷಿಣ್ಯವಾಗಿ ಘಟಕಗಳನ್ನು ಮುಚ್ಚುವಂತೆ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ಖೇಹರ್ ನೇತೃತ್ವದ ಪೀಠ ಆದೇಶಿಸಿದೆ. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ(ಸಿಪಿಸಿಬಿ) 2015ರಲ್ಲಿ ನಡೆಸಿದ್ದ ಅಧ್ಯಯನದ ಪ್ರಕಾರ, 275 ನದಿಗಳ ಹರಿವು 302 ಕಡೆಗಳಲ್ಲಿ ಕಲುಷಿತಗೊಂಡಿದೆ. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ನಿರ್ವಹಣಾ ವೆಚ್ಚ ಉಳಿಸುವ ಏಕೈಕ ಉದ್ದೇಶದಿಂದ ಕಾರ್ಖಾನೆಗಳು ಪರಿಸರ ಮತ್ತು ಜೀವಸಂಕುಲಕ್ಕೆ ಮಾರಕವಾಗುವ ಪ್ರವೃತ್ತಿಯನ್ನು ಬಹಳ ವರ್ಷಗಳಿಂದ ರೂಢಿಸಿಕೊಂಡಿದೆ. ಇದರಿಂದಾಗಿ ಜೀವಜಲ, ಜಲಚರಗಳು ಮತ್ತು ಮಾನವನಿಗೂ ವಿಷವಾಗಿ ಪರಿಣಮಿಸಿದೆ. ಇಂತಹ ಅಪಾಯವನ್ನು ತಡೆಗಟ್ಟಲು ತಕ್ಷಣವೇ ಕಾರ್ಯೋನ್ಮುಖವಾಗದಿದ್ದಲ್ಲಿ ಅದರಿಂದಾಗುವ ವ್ಯಾಪಕ ಹಾನಿಯನ್ನು ಭವಿಷ್ಯದಲ್ಲಿ ಸರಿಪಡಿಸಲು ಸಾಧ್ಯವಾಗಲಾರದು ಎಂದೂ ಕೋರ್ಟ್ ತೀವ್ರ ಆತಂಕ ವ್ಯಕ್ತಪಡಿಸಿದೆ.**

ವಿಶ್ವವಿದ್ಯಾಲಯಗಳ ಜಾಗತಿಕ ಶ್ರೇಷ್ಠ ರ್‍ಯಾಂಕಿಂಗ್ ಪಟ್ಟಿಯ ಮೊದಲ 10ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ಸ್ಥಾನ ಪಡೆದಿದೆ. ಟೈಮ್ಸ್ ಹೈಯರ್ ಎಜುಕೇಷನ್ (THE) 2017ರ 'ವಿಶ್ವದ ಶ್ರೇಷ್ಠ ಚಿಕ್ಕ ವಿಶ್ವವಿದ್ಯಾಲಯ'ಗಳ ಪಟ್ಟಿ ಪ್ರಕಟಿಸಿದೆ. ಐಐಎಸ್‌ಸಿ 8ನೇ ಸ್ಥಾನದಲ್ಲಿದ್ದು, ಟಾಪ್ 20ರಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕ ವಿಶ್ವವಿದ್ಯಾಲಯವಾಗಿದೆ. 5 ಸಾವಿರಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು



ಅಧ್ಯಯನ ನಡೆಸುತ್ತಿರುವ ವಿಶ್ವವಿದ್ಯಾಲಯವನ್ನು 'ಸಣ್ಣ ವಿಶ್ವವಿದ್ಯಾಲಯ'ಗಳ ಸಾಲಿಗೆ ಸೇರಿಸಲಾಗುತ್ತದೆ. ಕಳೆದ ವರ್ಷದ ರ್‍ಯಾಂಕಿಂಗ್ ಪಟ್ಟಿಯ ಟಾಪ್ 20ರಲ್ಲಿ ದೇಶದ ಎರಡು ವಿವಿಗಳು ಸ್ಥಾನಪಡೆದಿದ್ದವು. ಆದರೆ, ಭಾರತದ ಯಾವೊಂದು ವಿವಿಯೂ ಟಾಪ್ 10ರೊಳಗೆ ಪ್ರವೇಶ ಪಡೆದಿರಲಿಲ್ಲ. ಟೈಮ್ಸ್ ಹೈಯರ್ ಎಜುಕೇಷನ್ ವಿಶ್ವದ 900ಕ್ಕೂ ಹೆಚ್ಚು ವಿವಿಗಳ ವಿಶ್ಲೇಷಣೆ ನಡೆಸಿ ರ್‍ಯಾಂಕಿಂಗ್ ಪ್ರಕಟಿಸುತ್ತದೆ. ಜೆಮ್‌ಶೆಡ್‌ಜಿ ಟಾಟಾ ಹಾಗೂ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹಕಾರದೊಂದಿಗೆ ಬೆಂಗಳೂರಿನಲ್ಲಿ ಐಐಎಸ್‌ಸಿ ಸ್ಥಾಪನೆಯಾಗಿತ್ತು.




ಸಮಾಜಕ್ಕಾಗಿ ಏನಾದರೂ ಮಾಡಬೇಕು, ಜೀವನದಲ್ಲಿ ಹೊಸದನ್ನೊಂದನ್ನು ಸಾಧಿಸಬೇಕು ಎಂಬ ಛಲ ಯಾರಿಗಿರಲ್ಲ ಹೇಳಿ. ಈ ಛಲಕ್ಕೆ ರೆಕ್ಕೆಪುಕ್ಕ ಕಟ್ಟಿಕೊಂಡವರೇ ಯಶಸ್ವಿಯಾಗುತ್ತಾರೆ.

## ಲಿಖಿತಾ ಭಾನು

22ರ ಹರೆಯದ ಯುವತಿ ಲಿಖಿತಾ ಭಾನು ತಾಯಿಯ ನೆರವಿನೊಂದಿಗೆ ಸಾವಯವ ಕೃಷಿ ಉತ್ಪನ್ನಗಳ ಕಂಪೆನಿ ಕಟ್ಟುವ ಮೂಲಕ ಸುಮಾರು ಹತ್ತು ಸಾವಿರ ರೈತರಿಗೆ ನೆರವಾಗಿದ್ದಾರೆ. ಬಯೋಟೆಕ್ನಾಲಜಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿರುವ ಲಿಖಿತಾ ಭಾನು ಅವರ ಸಾಧನೆ ಅಸಾಧಾರಣವಾದುದು.

ಲಿಖಿತಾ ಆಂಧ್ರಪ್ರದೇಶದ ವೆಲ್ಲೂರಿನವರು. ತಂದೆ ಕೇಂದ್ರ ಸರ್ಕಾರಿ ನೌಕರ. ಲಿಖಿತಾ ಹುಟ್ಟಿದ್ದು ಆಂಧ್ರಪ್ರದೇಶದಲ್ಲಾದರೂ ಓದಿ, ಬೆಳೆದದ್ದು ಅಸ್ಸಾಂ ರಾಜ್ಯದಲ್ಲಿ. ಲಿಖಿತಾ ತಂದೆ 20ವರ್ಷ ಅಸ್ಸಾಂ ರಾಜ್ಯದಲ್ಲೇ ಸೇವೆ ಸಲ್ಲಿಸಿದ್ದರು. ಟೀ ತೋಟಗಳು, ಗುಡ್ಡಗಾಡಿನ ಹಸಿರನ್ನು ಕಣ್ತುಂಬಿಕೊಂಡು ಬೆಳೆದಿದ್ದ ಲಿಖಿತಾಗೆ ಸಹಜವಾಗಿಯೇ ಕೃಷಿಯ ಮೇಲೆ ಒಲವು ಮೂಡಿತ್ತು.

ಅಸ್ಸಾಂನಲ್ಲಿ ದಕ್ಷಿಣ ಭಾರತದ ತರಕಾರಿಗಳು ಸಿಗುತ್ತಿರಲಿಲ್ಲ. ಹಾಗಾಗಿ ಅವರು, ಮನೆಯ ಪಕ್ಕದಲ್ಲೇ ಸಣ್ಣದೊಂದು ಕೈತೋಟ ಮಾಡಿಕೊಂಡು ತರಕಾರಿಗಳನ್ನು ಬೆಳೆಸುತ್ತಿದ್ದರು. ಇದೆಲ್ಲವನ್ನು ಗಮನಿಸುತ್ತಿದ್ದ ಲಿಖಿತಾ, ಕೃಷಿ ಮಾಡುವ ಕನಸು ಕಂಡು ಅದನ್ನು ನನಸಾಗಿಸಿಕೊಂಡರು. ಬಯೋಟೆಕ್ನಾಲಜಿ ಪದವಿಯ ಬಳಿಕ ಲಿಖಿತಾ ತಾಯಿ ಜತೆಯಲ್ಲಿ ಆಂಧ್ರಪ್ರದೇಶಕ್ಕೆ ಮರಳಿದರು.

ವೆಲ್ಲೂರಿನಲ್ಲಿ ಎರಡು ಎಕರೆ ಜಮೀನು ಖರೀದಿಸಿ ಸಾವಯವ ಕೃಷಿ ಆರಂಭಿಸಿದರು. ಅದರಲ್ಲಿ ಬೆಳೆದಿದ್ದ ತರಕಾರಿ, ದವಸ ಧಾನ್ಯಗಳನ್ನು ಪರಿಚಿತರಿಗೆ ಮಾರಾಟ ಮಾಡಲು ಆರಂಭಿಸಿದರು. ಹೀಗೆ ಸಣ್ಣದಾಗಿ ಆರಂಭವಾದ ಲಿಖಿತಾರ ಕೃಷಿಕಾಯಕ 'ಟೆರ್ರಾ ಗ್ರೀನ್ಸ್ ಆರ್ಗಾನಿಕ್' ಎಂಬ ಕಂಪೆನಿ ಹುಟ್ಟಿಗೆ ಕಾರಣವಾಯಿತು. ಆಂಧ್ರ ಪ್ರದೇಶ, ರಾಜಸ್ಥಾನ ಮತ್ತು ಮಹಾರಾಷ್ಟ್ರ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ರೈತರು ಬೆಳೆದ ಸಾವಯವ ಉತ್ಪನ್ನಗಳನ್ನು ಖರೀದಿಸಿ 'ಟೆರ್ರಾ ಗ್ರೀನ್ಸ್ ಆರ್ಗಾನಿಕ್' ಕಂಪೆನಿ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ.

ಸಾವಯವ ಬೆಳೆಯನ್ನು ಪ್ರೋತ್ಸಾಹಿಸುವುದು ಮತ್ತು ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನ ನೀಡುವ ಉದ್ದೇಶದಿಂದ ಈ ಕಂಪೆನಿ ಆರಂಭಿಸಿರುವುದಾಗಿ ಲಿಖಿತಾ ಹೇಳುತ್ತಾರೆ.
ಸಂಪರ್ಕ: www.terragreensorganic.com

## ಸರ್ಕಾರೀ ಉದ್ಯೋಗ ಪಡೆದ ಪ್ರತ್ಯೇಕತಾವಾದಿ ಗಿಲಾನಿ ಮೊಮ್ಮಗ

ಪಾಕಿಸ್ತಾನ ಬೆಂಬಲಿತ ಕಾಶ್ಮೀರ ಪ್ರತ್ಯೇಕತಾವಾದಿ ಹೋರಾಟಗಾರ ಸಯ್ಯದ್ ಸಯ್ಯದ್ ಅಲಿ ಶಾ ಗಿಲಾನಿ ಮೊಮ್ಮಗ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಸರ್ಕಾರೀ ಉದ್ಯೋಗಕ್ಕೆ ಸೇರ್ಪಡೆಯಾಗಿದ್ದಾರೆ. ಗಿಲಾನಿ ಮೊಮ್ಮಗನಾದ ಅನೀಸ್ ಉಮ್ ಇಸ್ಲಾಂಗೆ ಅವರು ಜಮ್ಮು ಮತ್ತು ಕಾಶ್ಮೀರ ಪ್ರವಾಸೋದ್ಯಮ ಇಲಾಖೆಯಲ್ಲಿ ಬರುವ ಶೇರ್ ಎ ಕಾಶ್ಮೀರ್ ಇಂಟರ್‌ನ್ಯಾಷನಲ್ ಕನ್ವೆಂಷನ್ ಕಾಂಪ್ಲೆಕ್ಸ್ (ಎಸ್‌ಕೆಐಸಿಸಿ)ಯಲ್ಲಿ ರಿಸರ್ಚ್ ಆಫೀಸರ್ ಆಗಿ ಉದ್ಯೋಗಕ್ಕೆ ಸೇರ್ಪಡೆಗೊಂಡಿದ್ದಾರೆ. ಪ್ರಸ್ತುತ ವಾರ್ಷಿಕ 12 ಲಕ್ಷ ರೂ. ವೇತನ ಮತ್ತು ಪಿಂಚಣಿ ಸೌಲಭ್ಯ ದೊರೆಯುತ್ತಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಈ ಮೂಲಕ ಸದಾ ಪಾಕಿಸ್ತಾನ ಪರವಾಗಿ ಮಾತನಾಡುತ್ತ, ಭಾರತದ ಸಂವಿಧಾನ ಕಾನೂನುಗಳನ್ನು ತುಚ್ಛವಾಗಿ ಕಾಣುವ ಹಾಗೂ ಪ್ರತ್ಯೇಕತೆಯ ಹೆಸರಿನಲ್ಲಿ ಬೇರೆಯವರ ಮಕ್ಕಳ ಕೈಗೆ ಕಲ್ಲು ನೀಡುವ ಈ ಪ್ರತ್ಯೇಕತಾವಾದಿಗಳ ನಿಜ ಬಣ್ಣಬಯಲಾದಂತಾಗಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-3-2017



# ಗುರೂಜೀ ಮತ್ತು ಸಮಕಾಲೀನ ಭಾರತ

**ಆರೆಸ್ಸೆಸ್ ದ್ವಿತೀಯ ಸರಸಂಘಚಾಲಕ ಶ್ರೀಗುರೂಜಿ (ಮಾಧವ ಸದಾಶಿವರಾವ್ ಗೋಳ್ವಲ್ಕರ್) ಜನ್ಮದಿನದ ನಿಮಿತ್ತ ಬೆಂಗಳೂರಿನ 'ಮಂಥನ' ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಖ್ಯಾತ ಆರ್ಥಿಕತಜ್ಞ, ಹಿರಿಯ ಪತ್ರಕರ್ತ ಎಸ್. ಗುರುಮೂರ್ತಿ ಅವರು ನೀಡಿದ ಉಪನ್ಯಾಸದ ಸಾರಾಂಶ.**

ಆರೆಸ್ಸೆಸ್ ಮತ್ತು ಗೋಳ್ವಲ್ಕರ್‌ರನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವಿಲ್ಲ. ಏಕೆಂದರೆ ಆರೆಸ್ಸೆಸ್ಸಿನ ಸಿದ್ಧಾಂತ, ಕಾರ್ಯಪದ್ಧತಿ, ಚರಿತ್ರೆ, ಶಿಸ್ತು, ತರಬೇತಿಯ ಮಾದರಿ, ಸಾರ್ವಜನಿಕ ಚಿತ್ರಣ ಇವೆಲ್ಲ ಒಟ್ಟಿಗೆ ಹೊಂದಿಕೊಂಡಿವೆ. ಕಳೆದ ಅನೇಕ ದಶಕಗಳಲ್ಲಿ ಬಹುಶಃ ಅತಿಹೆಚ್ಚು ಪ್ರಶಂಸೆಗೆ ಮತ್ತು ಅಷ್ಟೇ ಪ್ರಮಾಣದ ತೆಗಳಿಕೆಗೆ ಒಳಗಾದ ಸಂಘಟನೆ ಆರೆಸ್ಸೆಸ್; ಹಾಗೆಯೇ ಗುರೂಜೀ ಗೋಳ್ವಲ್ಕರ್ ಕೂಡ. ಸಾಮಾಜಿಕವಾಗಿ ಪ್ರಶಂಸಿಸಲ್ಪಡುವ ಆರೆಸ್ಸೆಸ್ ರಾಜಕೀಯ ಕಾರಣಗಳಿಂದಾಗಿ




ವಿರೋಧಕ್ಕೆ ಒಳಗಾಗಿದೆ. ಇದೇ ರೀತಿ ಗುರೂಜೀಯವರೂ ಸತ್ಯ ಅಥವಾ ಅಪಾರ್ಥಕ್ಕೆ, ಪ್ರಶಂಸೆ ಅಥವಾ ಟೀಕೆಗೆ ಒಳಗಾದರು. ಆದರೆ ಪ್ರಶಂಸೆ ಅಥವಾ ಟೀಕೆಯ ಮಿತಿಯನ್ನು ದಾಟದ ಹೊರತು ಕೇವಲ ತನ್ನ ತಾಯ್ನಾಡಿಗಷ್ಟೇ ಅಲ್ಲ ಇಡೀ ವಿಶ್ವಕ್ಕೆ ಮಾರ್ಗದರ್ಶನ ನೀಡಬಲ್ಲ ದೃಷ್ಟಿಕೋನ ಹೊಂದಿದ್ದ ಶ್ರೇಷ್ಠ ತತ್ವಜ್ಞ ಚಿಂತಕರಾಗಿದ್ದ ಗುರೂಜಿಯವರ ಪೂರ್ಣ ವ್ಯಕ್ತಿತ್ವದ ಪರಿಚಯ ದೊರಕುವುದಿಲ್ಲ. ಹಾಗೆಯೇ ಗುರೂಜಿಯವರನ್ನು ಕೇವಲ ಭಾರತಕ್ಕೆ ಸೀಮಿತಗೊಳಿಸುವ ಪ್ರಯತ್ನವನ್ನು ಕೆಲವರು ಮಾಡುತ್ತಾರೆ, ಇದೂ ಸರಿಯಾದುದಲ್ಲ. ಸಂಘವನ್ನು ವಿಶ್ಲೇಷಣೆ ಮಾಡದೇ ಗುರೂಜೀಯವರ ವ್ಯಕ್ತಿತ್ವವನ್ನು ವಿಶ್ಲೇಷಣೆ ಮಾಡುವುದು ಸಾಧ್ಯವಿಲ್ಲ, ಈ ಎರಡು ವ್ಯಕ್ತಿತ್ವಗಳು ಬೇರ್ಪಡಿಸಲಾರದಂತೆ ಬೆರೆತಿವೆ. 33 ವರ್ಷಗಳ ಕಾಲ ಅತ್ಯಂತ ಕಠಿಣ ಸಮಯದಲ್ಲಿ ಅವರು ಸಂಘಕ್ಕೆ ಮಾರ್ಗದರ್ಶನ ನೀಡಿದರು. ದೇಶಹಿತ, ಹಿಂದೂ ಹಿತದಲ್ಲಿ ಸಂಘವನ್ನು ರೂಪಿಸಿದರು.

ಯಾವುದೇ ವ್ಯಕ್ತಿ ಅಥವಾ ಸಿದ್ಧಾಂತವನ್ನು ಟೀಕೆಗೆ ಒಳಪಡಿಸಬೇಕಾದಾಗ ಅವರ ಬಗ್ಗೆ ಆಳವಾಗಿ ಅಧ್ಯಯನ ಮಾಡಿರಬೇಕು ಇಲ್ಲವಾದರೆ ಟೀಕಿಸುವ ಅಧಿಕಾರ ನಮಗೆ ಬರುವುದಿಲ್ಲ. ಆದರೆ ಗೋಳ್ವಲ್ಕರ್ ಮತ್ತು ಸಂಘದ ಮೇಲಿನ ಎಲ್ಲಾ ಟೀಕೆಗಳ ಹಿಂದೇ ಯಾವುದೇ ಅಧ್ಯಯನವೇ ಇಲ್ಲ. ಇದನ್ನು ಕಮ್ಯುನಿಸ್ಟ್ ಚಿಂತಕರೇ ಒಪ್ಪಿಕೊಂಡಿದ್ದಾರೆ.

1940ರ ವರೆಗೆ ಆರೆಸ್ಸೆಸ್ ವಿಚಾರಧಾರೆ ಮತ್ತು ದೇಶದ ಉಳಿದ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತಕರ ವಿಚಾರಗಳಲ್ಲಿ ಬಹುತೇಕ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಭಾರತದ ಹೊರಗೂ ಸಹ ಬೇರೆ ಬೇರೆ ಎಡಪಂಥೀಯ ಚಿಂತಕರು ಭಾರತವನ್ನು ನೋಡಿದ ದೃಷ್ಟಿಯು ಆರೆಸ್ಸೆಸ್ ವಿಚಾರಕ್ಕಿಂತ ಬಹಳ ಭಿನ್ನವಾಗಿರಲಿಲ್ಲ. 1940ರವರೆಗೆ ಕಮ್ಯುನಿಸ್ಟರು, ಗಾಂಧಿಜೀ, ನೆಹರು ಇವರೆಲ್ಲರ ವಿಚಾರಗಳಲ್ಲಿ ಭಾರತದ ಹಿಂದೂ ಗುರುತಿನ ಬಗ್ಗೆ ಒಮ್ಮತವಿತ್ತು. ಈ ದಾಖಲೆಗಳನ್ನು ಪುನಃ ಬರೆದು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ. ಆದರೆ 1940ರಲ್ಲಿ ಮುಸ್ಲಿಂ ಲೀಗ್ ಪಾಕಿಸ್ತಾನವನ್ನು ನಿರ್ಮಿಸುವ ನಿರ್ಣಯವನ್ನು ಅಂಗೀಕರಿಸಿದ ನಂತರ ಇವೆಲ್ಲವೂ ಬದಲಾದವು. ಇದರಿಂದ ಇಡೀ ರಾಜಕೀಯ ಚರ್ಚೆಯೇ ಬದಲಾಯಿತು. ಹಿಂದು, ಹಿಂದುತ್ವದ ತತ್ತ್ವ ಮತ್ತು ಸಂಸ್ಕೃತಿಯೊಂದಿಗೆ ಭಾರತದ ಗುರುತು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತ ಸಂಪೂರ್ಣ ಭಾರತಕ್ಕಲ್ಲ ಎನ್ನುವ ರಾಜಕೀಯ ವ್ಯಾಖ್ಯೆ 1940ರ ನಂತರ ಆರಂಭವಾಯಿತು. ಭಾರತದ ಹಿಂದೂ ಗುರುತಿನ ಕುರಿತು ಸಾಮಾನ್ಯ ಒಮ್ಮತವಿದ್ದ ವಿಚಾರ ಬದಲಾಗುತ್ತಿರುವ ಸಮಯದಲ್ಲಿ ಗೋಳ್ವಲ್ಕರ್ ಸಂಘದ ನೇತೃತ್ವ ವಹಿಸಿಕೊಂಡರು. ಇಂತಹ ನಿರ್ಣಾಯಕ ಕಾಲದಲ್ಲಿ ಅವರು ಸಂಘವನ್ನು ಮುನ್ನಡೆಸಿದರು. ಸಂಘ 1940ರವರೆಗೆ ಭಾರತದ ಹಿಂದೂ ಅಸ್ಮಿತೆಯ ಕುರಿತು ಇಡೀ ದೇಶದಲ್ಲೇ ಸ್ಥಾಪಿತವಾಗಿದ್ದ ವಿಚಾರದ ಪರವಾಗಿ ಆರೆಸ್ಸೆಸ್ ನಿಂತಿದೆಯೇ ಹೊರತು ಹೊಸದೊಂದು ವಿಚಾರವನ್ನು ಹುಟ್ಟುಹಾಕಿಲ್ಲ. ಆರೆಸ್ಸೆಸ್ ಹಿಂದೂ ರಾಷ್ಟ್ರೀಯತೆಯ ವಿಚಾರವನ್ನು ಹುಟ್ಟುಹಾಕಿಲ್ಲ, ಬದಲಿಗೆ 1940ರವರೆಗೆ ಸಾಮಾನ್ಯವಾಗಿ ಎಲ್ಲ ವರ್ಗದವರೂ ಒಪ್ಪಿದ್ದ ಭಾರತದ ಹಿಂದೂ ರಾಷ್ಟ್ರೀಯತೆಯ ಗುರುತನ್ನೇ ಪ್ರತಿಪಾದಿಸಿತು. ಆರೆಸ್ಸೆಸ್ ಗುರೂಜಿಯವರ ನೇತೃತ್ವದಲ್ಲಿ ಭಾರತದ ಪುರಾತನ ಏಕತೆಯನ್ನು ಪುನಃ ಸ್ಥಾಪಿಸಲು ಕಾರ್ಯಮಾಡತೊಡಗಿತು.

ಅಮೆರಿಕದ ಶಿಕಾಗೋ ವಿಶ್ವವಿದ್ಯಾಲಯ ನಡೆಸಿದ 'ಫಂಡಮೆಂಟಲಿಸಂ' ಹೆಸರಿನ ಅಧ್ಯಯದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿದಂತೆ ವಿವಿಧ ಮತ ಮತ್ತು ಆರೆಸ್ಸೆಸ್ ಸೇರಿದಂತೆ ವಿವಿಧ ಸಂಘಟನೆಗಳಲ್ಲಿ ಮತೀಯ ಮೂಲಭೂತವಾದವನ್ನು ಕುರಿತು ಅಧ್ಯಯನ ನಡೆಸಿತು. ಈ ಅಧ್ಯಯನವು ಹಿಂದುತ್ವ, ಹಿಂದೂರಾಷ್ಟ್ರ, ಹಿಂದೂ ಸಾಂಸ್ಕೃತಿಕ ರಾಷ್ಟ್ರೀಯತೆ ಈ ವಿಷಯಗಳ ಕುರಿತಾದ ಗುರೂಜಿಯವರ ವಿಚಾರಗಳಿಗೆ ಬೆಂಬಲ ಸೂಚಿಸಿದೆ.

ಆರೆಸ್ಸೆಸ್ ಕುರಿತು ಮಾತನಾಡುವಾಗಲೆಲ್ಲ ಇದೊಂದು ಹಿಂದೂ ಪುನರುತ್ಥಾನ ಮಾಡುವ, ಪ್ರತಿಕ್ರಿಯಾತ್ಮಕ ಸಂಘಟನೆ ಎಂದು ಹೇಳಲಾಗುತ್ತಿತ್ತು. ಆದರೆ ಈ ವ್ಯಾಖ್ಯಾನಗಳು ಹಿಂದುತ್ವಕ್ಕೆ ಒಪ್ಪುವಂತವಲ್ಲ. ಏಕೆಂದರೆ ಯಾರಿಗೂ ಪ್ರತಿಕ್ರಿಯೆ ನೀಡುವವರಲ್ಲ, ನಾವು ಸರ್ವವೂ ಸೇರಿರುವ ಸಂಘಟನೆ, ನಾವು ಎಲ್ಲರನ್ನೂ ಒಪ್ಪುತ್ತೇವೆ ಎನ್ನುವುದು ಗುರೂಜೀಯವರ ಅಭಿಪ್ರಾಯವಾಗಿತ್ತು.

ರಾಷ್ಟ್ರ ಮತ್ತು ರಾಜ್ಯ (ನೇಶನ್ ಮತ್ತು ಸ್ಟೇಟ್) ಇವೆರಡೂ ಬೇರೆ ಬೇರೆ, ಉಳಿದೆಲ್ಲ ದೇಶಗಳಲ್ಲಿ ರಾಜ್ಯವು ರಾಷ್ಟ್ರವನ್ನು ನಿರ್ಮಿಸಿದರೆ ನಮ್ಮಲ್ಲಿ ರಾಜ್ಯವಿಲ್ಲದೆಯೇ ರಾಷ್ಟ್ರವಿತ್ತು, ವಿರೋಧೀ ರಾಜ್ಯವಿದ್ದರೂ ರಾಷ್ಟ್ರವಿತ್ತು. ರಾಷ್ಟ್ರ ಎನ್ನುವುದು ಪ್ರೇಮ ಮತ್ತು ಏಕತೆಯ ಮೇಲೆ ನಿಂತಿರುವ ಮಾನಸಿಕ ಸ್ಥಿತಿ, ಅದು ಎರಡು ಸಾವಿರ ವರ್ಷಗಳಿಂದ ರಾಜ್ಯವಿಲ್ಲದೇ ನಿಲ್ಲಬಲ್ಲದ್ದು, ಇಸ್ರೇಲಿನ ಯಾವುದೇ ಭೂಭಾಗವು ನಿಯಂತ್ರಣದಲ್ಲಿರದಿದ್ದರೂ ಜ್ಯೂ ರಾಷ್ಟ್ರವು ಜ್ಯೂಗಳ ಹೃದಯದಲ್ಲಿ ನೆಲೆಸಿತ್ತು. ರಾಷ್ಟ್ರ ಎನ್ನುವುದು ಜನರ ಮನೋಬುದ್ಧಿ ಹೃದಯಗಳಲ್ಲಿ ಜೀವಂತವಾಗಿರುತ್ತದೆ, ಆದರೆ ರಾಜ್ಯಕ್ಕೆ ಸ್ವತಂತ್ರವಾದ ಅಸ್ತಿತ್ವ ಇದೆ ಎನ್ನುವುದು ಗುರೂಜೀಯವರ ಅಭಿಪ್ರಾಯವಾಗಿತ್ತು.

ಗುರೂಜೀಯವರ ವಿಚಾರಗಳು ಶಿಕಾಗೋ ವಿಶ್ವವಿದ್ಯಾಲಯದ ಅಧ್ಯಯನದಲ್ಲಿ ಪ್ರತಿಧ್ವನಿತವಾಗಿವೆ. ಹಾಗೆಯೇ ಭಾರತದ ಸರ್ವೋಚ್ಚ ನ್ಯಾಯಾಲಯದ ಹಿಂದುತ್ವ ಜಡ್ಜಮೆಂಟಿನಲ್ಲಿಯೂ ಗುರೂಜೀಯವರು ಬಂಚ್ ಆಫ್ ಥಾಟ್‌ನಲ್ಲಿ ಹೇಳಿರುವ ಶಬ್ದಗಳೇ ಉಲ್ಲೇಖಗೊಂಡಿವೆ.

ಪರಿಪೂರ್ಣ ವ್ಯಕ್ತಿತ್ವದ ಗುರೂಜೀ ಕೇವಲ ಆರೆಸ್ಸೆಸ್ ಮಾತ್ರವಲ್ಲದೇ, ಸಂದಿಗ್ಧ ಕಾಲದಲ್ಲಿ ದೇಶಕ್ಕೂ ಮಾರ್ಗದರ್ಶನ ನೀಡಿದರು. ಅವರ ಸಾತ್ವಿಕ ಶಕ್ತಿ ಮತ್ತು ಪರಿಶುದ್ಧತೆ ಎಷ್ಟು ಶ್ರೇಷ್ಠವಾಗಿತ್ತೆಂದರೆ ಆರೆಸ್ಸೆಸ್ ವಿರೋಧೀ ವಾತಾವರಣ ತೀವ್ರವಾಗಿದ್ದ ಸಮಯದಲ್ಲಿ ಗುರೂಜೀ ಮೃತರಾದಾಗ ಸಂಸತ್ತು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿತು, ಸಂಸತ್ತಿನಲ್ಲಿ ಚರ್ಚೆಯ ನೇತೃತ್ವ ವಹಿಸಿದ್ದವರು ಗುರೂಜೀಯವರೊಂದಿಗೆ ಬಹಳ ವೈಚಾರಿಕ ಭಿನ್ನಾಭಿಪ್ರಾಯ ಹೊಂದಿದ್ದ ಸ್ವಯಂ ಇಂದಿರಾ ಗಾಂಧಿ. ಅವರು ಎಷ್ಟು ಪ್ರಸ್ತುತ ಎಂದರೆ ಸಂಘವಷ್ಟೇ ಅಲ್ಲ ದೇಶದ ವಿಷಯದಲ್ಲಿ ಅವರ ಪರಿಕಲ್ಪನೆಯಲ್ಲಿ ಮೂಡಿದ, ಹೇಳಿದ, ಮಂಡಿಸಿದ, ರೂಪಗೊಳಿಸಿದ ವಿಚಾರಗಳನ್ನು ತದನಂತರದ ಸಮಯದಲ್ಲಿ ನಡೆದ ಘಟನೆಗಳು ಪುಷ್ಟೀಕರಿಸಿವೆ. ಉದಾಹರಣೆಗೆ ಚೀನಾದ ಕುರಿತು ಕೇಳಿದ ಪ್ರಶ್ನೆಗೆ 'ಕಮ್ಯುನಿಸ್ಟ ಚೀನಾದಿಂದ ಕನ್‌ಫ್ಯೂಶಿಯನ್ ಚೀನಾ ಹುಟ್ಟುವುದು, ಆದರೆ ಅದರ ಸಾಮ್ರಾಜ್ಯಶಾಹಿ ಪ್ರವೃತ್ತಿ ಹಾಗೇ ಬೆಳೆಯುವುದು' ಎಂದು ಹೇಳಿದ್ದರು. ಹಾಗೆಯೇ ಪಾಕಿಸ್ತಾನದ ಕುರಿತು 'ಅದು ವಿಶ್ವಕ್ಕೆ ಸದಾ ಉಪದ್ರವಕಾರಿಯಾಗಿರಲಿದೆ' ಎಂದು ಹೇಳಿದ್ದರು. ಇಂದು ನಾವು ಇದನ್ನೇ ಕಾಣುತ್ತಿದ್ದೇವೆ. ಅವರು ಕೇವಲ ಆಯಾ ಸಾಂದರ್ಭಿಕ ಸನ್ನಿವೇಶಕ್ಕೆ ಸೀಮಿತರಾಗಿರಲಿಲ್ಲ. ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಅವರೊಬ್ಬರು ಋಷಿಯಾಗಿದ್ದರು.

## ವಾಟ್ಸಾಪ್‌ನಲ್ಲಿ ತಲಾಖ್; ಪೊಲೀಸ್ ಠಾಣೆ ಮೆಟ್ಟಿಲೇರಿದ ಮುಸ್ಲಿಂ ಮಹಿಳೆ



ಮುಸ್ಲಿಂ ಸಮುದಾಯದಲ್ಲಿರುವ 'ತಲಾಖ್' ಪದ್ಧತಿಯನ್ನು ನಿಷೇಧಿಸುವ ಆಗ್ರಹಗಳು ಎಲ್ಲೆಡೆ ಕೇಳಿಬರುತ್ತಿರುವಾಗಲೇ ಸಾಮಾಜಿಕ ಜಾಲತಾಣಗಳ ಮೂಲಕ ತಲಾಖ್ ನೀಡಿದ ಎರಡು ಪ್ರಕರಣಗಳು ಹೈದಾರಾಬಾದ್‌ನಲ್ಲಿ ನಡೆದಿದೆ.

ಅಮೆರಿಕದಲ್ಲಿ ಉದ್ಯೋಗ ಮಾಡುತ್ತಿರುವ ಉಸ್ಮಾನ್ ಖುರೇಶಿ ವಾಟ್ಸ್‌ಆಪ್ ಮೂಲಕ ತನಗೆ ಮೂರು ಬಾರಿ ತಲಾಖ್ ನೀಡಿದ್ದರು. ತಕ್ಷಣವೇ ಮಾವ, ಅತ್ತೆ ಮತ್ತು ನಾದಿನಿ ಸೇರಿಕೊಂಡು ನನ್ನನ್ನು ಮನೆಯಿಂದ ಹೊರಹಾಕಿದ್ದಾರೆ ಎಂದು 20 ವರ್ಷದ ಮೆಹರೀನ್ ನೂರ್ ಅವರು ಹೈದರಾಬಾದ್‌ನ ಮೊಘಲಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಖುರೇಶಿ ಅಣ್ಣ ಸಯ್ಯದ್ ಫಯ್ಯಾಜುದ್ದೀನ್ ಸಹ ಅಮೆರಿಕದಲ್ಲಿ ನೆಲೆಸಿದ್ದು, ಅವರೂ ಸಹ ಪತ್ನಿ ಹೀನಾ ಫಾತಿಮಾ ಅವರಿಗೆ ಆರು ತಿಂಗಳ ಹಿಂದೆ ವಾಟ್ಸ್‌ಆಪ್ ಮೂಲಕ ವಿಚ್ಛೇದನ ನೀಡಿದ್ದರು. ಧೈರ್ಯದಿಂದ ಜೊತೆಯಾದ ಈ ಇಬ್ಬರು ಮಹಿಳೆಯರು ಮನೆ ಪ್ರವೇಶಿಸಲು ಯತ್ನಿಸಿದಾಗ ಅತ್ತೆ, ಮಾವ ಮತ್ತು ನಾದಿನಿ ಸೇರಿಕೊಂಡು ಅವರನ್ನು ಹೊರದಬ್ಬಿದ್ದಾರೆ. ಪೊಲೀಸರು ಈ ಮೂವರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ದೂರವಾಣಿ ಅಥವಾ ಇನ್ನಾವುದೆ ಮಾಧ್ಯಮದ ಮೂಲಕ ತ್ರಿವಳಿ ತಲಾಖ್ ಹೇಳುವುದು ಕಾನೂನು ಬಾಹಿರ ಎಂದು ಪೊಲೀಸರು ತಿಳಿಸಿದ್ದಾರೆ. ಗಾಂಧಿ ನಗರದಲ್ಲಿರುವ ಏಕೈಕ ಮಹಿಳಾ ಪೊಲೀಸ್ ಠಾಣೆಯಲ್ಲಿ ಇಂತಹ 388 ದೂರುಗಳು ದಾಖಲಾಗಿವೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.